ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ 1092/16**

ಪಿಡಬ್ಲ್ಯುಃ – 8

ಸಿಡಬ್ಲ್ಯುಃ – **14**

ದಿನಾಂಕಃ 29.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಪ್ರದೀಪ್ ಬಿ ಆರ್ |
| ತಂದೆಯ ಹೆಸರು | – ರಾಜೇಗೌಡ |
| ವಯಸ್ಸು | – 47 ವರ್ಷ |
| ವೃತ್ತಿ | – ಪಿ. ಐ. , ಪ್ರಧಾನ ಕಚೇರಿ, ಬೆಂಗಳೂರು |
| ವಾಸಸ್ಥಳ | – ಬೆಂಗಳೂರು |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ನಾನು ದಿಃ 30.07.2016 ರಿಂದ 01.10.2018ರವರೆಗೆ ಮಡಿಕೇರಿ ಗ್ರಾಮಾಂತರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 30.07.2016 ರಂದು ಈ ಪ್ರಕರಣದ ಕಡತವನ್ನು ಚಾಸಾ-13 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ದಿಃ 03.10.2016 ರಂದು ಚಾಸಾ-1 ರವರ ಮನೆಗೆ ನಾಪೋಕ್ಲು ಗ್ರಾಮ ಪಂಚಾಯತಿಯಿಂದ ಅಸ್ಸೆಸ್ಮೆಂಟ್ ಕಾಪಿಯನ್ನು ಚಾಸಾ-11 ರವರಿಂದ ಪಡೆದುಕೊಂಡಿರುತ್ತೇನೆ. ಆರೋಪಿಗಳ ವಿರುದ್ಧ ತನಿಖೆ ಪೂರ್ಣಗೊಳಿಸಿ ಮೇಲ್ನೋಟಕ್ಕೆ ಆರೋಪ ಸಾಬೀತಾದ ಮೇರೆಗೆ ಆರೋಪಿಗಳ ವಿರುದ್ಧ ಧೋಷಾರೋಪ ಪಟ್ಟಿ ಸಲ್ಲಿಸಿಕೊಂಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ನಾಪೋಕ್ಲು ಗ್ರಾಮ ಪಂಚಾಯತಿವರು ನೀಡಿರುವ ದೃಢೀಕರಣ ಪತ್ರ ಆಗಿದ್ದು, , ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ನ್ಯಾಯಾಲಯದ ಮುಂದಿರುವ 3ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 1 ಮತ್ತು 2 ನೇ ಆರೊಪಿತರು ಈ ದಿನ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಇ ಪಿ ಅರ್ಜಿ ಹಾಕಿದ್ದು, ಸದರಿ ಆರೋಪಿತರನ್ನು ಗುರುತಿಸಲು ತಕರಾರು ಇಲ್ಲ ಎನ್ನುತ್ತಾರೆ.

ಪಾಟೀ ಸವಾಲುಃ – ಆರೋಪಿತರ ಪರ ವಕೀಲರಾದ ಶ್ರೀ. ಎಸ್ ಎ ಎಸ್ ರವರಿಂದಃ-

ನಾನು ಚಾಸಾ-13 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ- 12 ದಾಖಲೆಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-12 ದಾಖಲೆಯ ಪ್ರಕಾರ ಮನೆ ಸಂಖ್ಯೆ 75 ಎಸ್ ಹಂಸ ಎನ್ನುವವರಿಗೆ ಸಂಬಂಧಪಟ್ಟಿದ್ದು ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ನಿಪಿ-12 ರಲ್ಲಿ ಸದರಿ ಘಟನಾ ಸ್ಥಳದ ಮನೆಯು ಚಾಸಾ-1 ರವರಿಗೆ ಸಂಬಂಧಪಟ್ಟಿದ್ದು ಎಂ ದು ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ಸದರಿ ಮನೆಯಲ್ಲಿ ಚಾಸಾ-1 ರವರು ಬಾಡಿಗೆದಾರರಾಗಿ ವಾಸವಾಗಿರುತ್ತಾರೆ ಎನ್ನುತ್ತಾರೆ. ಆ ರೀತಿ ಚಾಸಾ-1 ರವರು ಸದರಿ ಮನೆಯಲ್ಲಿ ಬಾಡಿಗೆದಾರರಾಗಿ ವಾಸವಾಗಿದ್ದಾರೆ ಎಂದು ಹೇಳಲು ನೀವೇನಾದರು ನಾಪೋಕ್ಲು ಗ್ರಾಮ ಪಂಚಾಯತಿಯಿಂದ ದಾಖಲೆ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಚಾಸಾ-1 ರವರಿಂದ ಸದರಿ ಮನೆಯ ಬಾಪ್ತು ನಾನು ಬಾಡಿಗೆ ಕರಾರನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ಆರೋಪಿ 1 ರಿಂದ 3ರವರಿಗೂ ಹಾಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡದೆ ಆರೋಪಿ 1 ರಿಂದ 3 ರವರ ವಿರುದ್ಧ ಸುಳ್ಳು ಧೋಷಾರೋಪಣಾ ಪಟ್ಟಿ ಸಲ್ಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/ –

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.